KACM510002322025

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ , ನ.ರಾ.ಪುರ

**ಸಿ ಸಿ ನಂ.28/2025**

ಫಿರ್ಯಾದಿ ಃ ಸರ್ಕಾರ (ಎನ್ ಆರ್ ಪುರ ಪೊಲೀಸರಿಂದ)

ವಿರುದ್ಧ

ಆರೋಪಿತರು ಃ 1. ಜಾಫರ್ ಸಾಧಿಕ್, ಬಿನ್ ನಾಸೀರ್,
35 ವರ್ಷ, ಚಾಲಕ ವೃತ್ತಿ,,
ವಾಸಃ ಹರಕೇರೆ ಎನ್.ಟಿ. ರೋಡ್,
2 ನೇ ತಿರುವು, ಶಿವಮೊಗ್ಗ.

### ಭಾರತೀಯ ನಾಗರಿಕ ಸುರಕ್ಷಾ ಸಂಹಿತ ಕಲಂ 351 ರ ಪ್ರಕಾರ ಆರೋಪಿತರ ಹೇಳಿಕೆ

ಪ್ರಶ್ನೆ : 1 ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೀನಿ.

ಪ್ರಶ್ನೆ : 2 ಪ್ರಾಸ 1 ನಿರಂಜನ್ ಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 14.06.2025 ರಂದು ಮದ್ಯಾಹ್ನ 1-30 ರ ಸುಮಾರಿಗೆ ತಾವು ತಮ್ಮ ಸಿಬ್ಬಂಧಿಯಾದ ಚಾಸಾ 6 ರಿಂದ 8 ರವರು ತಮ್ಮ ಇಲಾಖಾ ಜೀಪಿನಲ್ಲಿ ಗಸ್ತಿನಲ್ಲಿ ಇರುವಾಗ ಬಾತ್ಮೀದಾರರಿಂದ ಒಂದು ಕ್ಯಾರಿ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಯಾವುದೆ ಪರವಾನಗಿ ಇಲ್ಲದೆ ದನಗಳನ್ನು ತುಂಬಿಕೊಂಡು ಶಿವಮೊಗ್ಗದ ಕಡೆಗೆ ಸಾಗಾಟ ಮಾಡುತ್ತಿದ್ದಾರೆ ಎಂಬ ಬಾತ್ಮಿಯ ಮೇರೆಗೆ ತಾವು ಚಾಸಾ-4 ಮತ್ತು 5 ರವರಿಗೆ ಮೆಣಸೂರು ಸರ್ಕಲ್ ಬಳಿ ಬರುವಂತೆ ಹಾಗೂ ಚಾಸಾ-2 ಮತ್ತು 3 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ಕೋರಿದ್ದು, ಮದ್ಯಾಹ್ನ 2-30 ರ ಸುಮಾರಿಗೆ ಕುದುರೆಗುಂಡಿ ಕಡೆಯಿಂದ ಒಂದು ಸೂಪರ್ ಕ್ಯಾರಿ ಗೂಡ್ಸ್ ವಾಹನ ಬಂದಿದ್ದು, ಅದನ್ನು ಸೌತಿಕೆರೆ ಸರ್ಕಲ್ ನಲ್ಲಿ ತಡೆದು ನಿಲ್ಲಿಸಿ ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದರ ನೋಂದಣಿ ಸಂಖ್ಯೆ.ಕೆಎ.18 – ಸಿ.5499 ಇದ್ದು, ಸದರಿ ವಾಹನದಲ್ಲಿ 3 ಜಾನುವಾರುಗಳನ್ನು ಹಿಂಸಾತ್ಮಕ ರೀತಿಯಲ್ಲಿ ತುಂಬಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಸುಳ್ಳು.

ಪ್ರಶ್ನೆ : 3 ಪ್ರಾಸಾ 1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಜಾನುವಾರುಗಳನ್ನು ಸಾಗಿಸಲು ಪರವಾನಿಗೆ ಇರುವ ಬಗ್ಗೆ ಕೇಳಲಾಗಿ ತಾವು ಯಾವುದೆ ಪರವಾನಿಗೆ ಇರುವುದಿಲ್ಲವೆಂದು ತಿಳಿಸಿದ್ದು, ಸದರಿ ದನಗಳನ್ನು ತಲಮಕ್ಕಿ ಗ್ರಾಮದ ಸುರೇಶ್ ನಾಯ್ಕ ಇವರ

KACM510002322025

ಕಡೆಯಿಂದ ಖರೀದಿಸಿದ್ದಾಗಿ ಹಾಗೂ ಸದರಿ ವಾಹನ, ಜಾನುವಾರು ಹಾಗೂ ನಿಮ್ಮನ್ನು ವಶಕ್ಕೆ ಪಡೆದು ಮದ್ಯಾಹ್ನ 2-45 ರಿಂದ 3-30 ರವರೆಗೆ ಪಂಚರ ಸಮಕ್ಷಮ ಮಹಜರ್ ಮಾಡಿ ಭಾವಚಿತ್ರಗಳನ್ನು ತೆಗೆದು 4-00 ಗಂಟೆಗೆ ಠಾಣೆಗೆ ಬಂದು ವರದಿ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :4 ಪ್ರಾಸಾ 3 ಮಧು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 14.06.2025 ರಂದು ಮದ್ಯಾಹ್ನ 1-30 ರ ಸುಮಾರಿಗೆ ತಾವು ಚಾಸಾ-1 ರವರ ಜೊತೆ ತಮ್ಮ ಇಲಾಖಾ ಜೀಪಿನಲ್ಲಿ ಗಸ್ತಿನಲ್ಲಿ ಇರುವಾಗ ಚಾಸಾ-1 ರವರಿಗೆ ಬಾತ್ಮೀದಾರರಿಂದ ಒಂದು ಕ್ಯಾರಿ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಯಾವುದೆ ಪರವಾನಗಿ ಇಲ್ಲದೆ ದನಗಳನ್ನು ತುಂಬಿಕೊಂಡು ಶಿವಮೊಗ್ಗದ ಕಡೆಗೆ ಸಾಗಾಟ ಮಾಡುತ್ತಿದ್ದಾರೆ ಎಂಬ ಬಾತ್ಮಿಯ ಮೇರೆಗೆ ಚಾಸಾ-1 ರವರು ಚಾಸಾ-4 ಮತ್ತು 5 ರವರಿಗೆ ಮೆಣಸೂರು ಸರ್ಕಲ್ ಬಳಿ ಬರುವಂತೆ ಹಾಗೂ ಚಾಸಾ-2 ಮತ್ತು 3 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ಕೋರಿದ್ದು, ಮದ್ಯಾಹ್ನ 2-30 ರ ಸುಮಾರಿಗೆ ಕುದುರೆಗುಂಡಿ ಕಡೆಯಿಂದ ಒಂದು ಸೂಪರ್ ಕ್ಯಾರಿ ಗೂಡ್ಸ್ ವಾಹನ ಬಂದಿದ್ದು, ಅದನ್ನು ಚಾಸಾ-1 ರವರು ಸೌತಿಕೆರೆ ಸರ್ಕಲ್ ನಲ್ಲಿ ತಡೆದು ನಿಲ್ಲಿಸಿ ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದರ ನೋಂದಣಿ ಸಂಖ್ಯೆ.ಕೆಎ.18 – ಸಿ.5499 ಇದ್ದು, ಸದರಿ ವಾಹನದಲ್ಲಿ 3 ಜಾನುವಾರುಗಳನ್ನು ಹಿಂಸಾತ್ಮಕ ರೀತಿಯಲ್ಲಿ ತುಂಬಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :5 ಪ್ರಾಸ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ರವರು ಜಾನುವಾರುಗಳನ್ನು ಸಾಗಿಸಲು ಪರವಾನಿಗೆ ಇರುವ ಬಗ್ಗೆ ಕೇಳಲಾಗಿ ತಾವು ಯಾವುದೆ ಪರವಾನಿಗೆ ಇರುವುದಿಲ್ಲವೆಂದು ತಿಳಿಸಿದ್ದು, ಸದರಿ ದನಗಳನ್ನು ತಲಮಕ್ಕಿ ಗ್ರಾಮದ ಸುರೇಶ್ ನಾಯ್ಕ ಇವರ ಕಡೆಯಿಂದ ಖರೀದಿಸಿದ್ದಾಗಿ ಹಾಗೂ ಸದರಿ ವಾಹನ ಜಾನುವಾರು ಹಾಗೂ ನಿಮ್ಮನ್ನು ಚಾಸಾ-1 ರವರು ವಶಕ್ಕೆ ಪಡೆದು ಮದ್ಯಾಹ್ನ 2-45 ರಿಂದ 3-30 ರವರೆಗೆ ಪಂಚರ ಸಮಕ್ಷಮ ಮಹಜರ್ ಮಾಡಿ ಭಾವಚಿತ್ರಗಳನ್ನು ತೆಗೆದು 4-00 ಗಂಟೆಗೆ ಠಾಣೆಗೆ ಬಂದು ವರದಿ ನೀಡಿರುವುದಾಗಿ ಈ ಸಂಬಂಧ ತಾವು ಹೇಳಿಕೆ ಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 7 ಪ್ರಾಸಾ 5 ಶ್ರೀಮತಿ ಜ್ಯೋತಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 14.06.2025 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ವರದಿ, ಮಹಜರ್,

ಆರೋಪಿತರು ಹಾಗೂ ವಾಹನವನ್ನು ತಂದು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ ತಮ್ಮ ಠಾಣಾ ಗುನ್ನಾ ಸಂಖ್ಯೆ 52/2025 ರಲ್ಲಿ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ಕಳುಹಿಸಿದ ಬಗ್ಗೆ ನಂತರ ಜಾನುವಾರುಗಳನ್ನು ಪರೀಕ್ಷೆ ಮಾಡಲು ಪಶು ವೈದ್ಯಾಧಿಕಾರಿಗೆ ಮನವಿ ಸಲ್ಲಿಸಿದ ಬಗ್ಗೆ ಹಾಗೂ ಜಾನುವಾರುಗಳನ್ನು ಗೋಶಾಲೆ, ಬಸ್ತಿ ಮಠಕ್ಕೆ ಬಿಡಲು ಅನುಮತಿ ಪಡೆದುಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? ~~ಇದಕ್ಕೆ ನೀವು ಏನು ಹೇಳುತ್ತೀರಾ?~~

ಉತ್ತರ:

ಪ್ರಶ್ನೆ : 8 ಪ್ರಾಸಾ 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 15.06.2025 ರಂದು ಚಾಸಾ-2 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡ ಬಗ್ಗೆ, ದಿನಾಂಕಃ 16.06.2025 ರಂದು ಚಾಸಾ-5 ರವರಿಂದ ದೃಢೀಕರಣ ಪತ್ರ ಪಡೆದುಕೊಂಡಿದ್ದು, ನ್ಯಾಯಾಲಯದ ಆದೇಶದ ಮೇರೆಗೆ ವಾಹನವನ್ನು ಅದರ ಮಾಲೀಕರಿಗೆ ಬಿಡುಗಡೆ ಗೊಳಿಸಿದ ಬಗ್ಗೆ ಹಾಗೂ ಕೃತ್ಯ ಸ್ಥಳಕ್ಕೆ ಸಂಬಂಧಪಟ್ಟ ನಕಾಶೆ ಮತ್ತು ದಾಖಲೆಗಳನ್ನು ಚಾಸಾ-10 ಮತ್ತು 11 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :9 ನೀವು ಏನಾದರು ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ :10 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ ?

ಉತ್ತರಃ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗು ಸರಿಯಾಗಿದೆ ಎಂದು ದೃಢಿಕರಿಸಲಾಗಿದೆ.

ದಿನಾಂಕ **19** ನೇ ದಿವಸ ಮೇ ಮಾಹೆ **2026** ನೇ ಇಸವಿ

JAFAR SADEK
[signature]
ಆರೋಪಿ ಸಹಿಃ

[signature] 19/1/26
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್‌ಸಿ ನ.ರಾ.ಪುರ.